ಕಳೆದ ಒಂದು ವರ್ಷದಲ್ಲಿ ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಲಾದ ಜಮೀನಿನ ವಿವರ
(1-4-2003 ರಿಂದ 30-6-2004).

ಕ್ರ.ಸಂ.	ಗ್ರಾಮ	ಕಲಂ 4ರಂತೆ ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಲಾದ ದಿನಾಂಕ	ವಿಸ್ತೀರ್ಣ ಎ – ಗು
1.	ಕಾಡುಬೀಸನಹಳ್ಳಿ, ಬೆಂಗಳೂರು ಪೂರ್ವ ತಾಲ್ಲೂಕು	05–09–2003	30 – 35
2.	ಡಿಟೋ	05–09–2003	11 – 23
3.	ಡಿಟೋ	05–09–2003	03 – 22
4.	ದೇವರಬೀಸನಹಳ್ಳಿ	07–08–2003	01 – 02 1/2
5.	ಕಾಡುಬೀಸನಹಳ್ಳಿ, ಅಮಾನಿ ಬೆಳ್ಳಂದೂರುಖಾನೆ.	09–02–2004	06 – 03 04 – 21
6.	ದೇವರಬೀಸನಹಳ್ಳಿ ಬೆಳ್ಳಂದೂರು	13–02–2004	10 – 38
7.	ಹೂಡಿ, ಸೊಣ್ಣೇನಹಳ್ಳಿ, ಕುಂದಲಹಳ್ಳಿ	13–02–2004	139 – 02
8.	ದೇವರಬೀಸನಹಳ್ಳಿ, ಬೆಳ್ಳಂದೂರು. ಕರಿಯಮ್ಮನ ಅಗ್ರಹಾರ	07–05–2004	18 – 17 3/4
9.	ಕಾಡುಬೀಸನಹಳ್ಳಿ.	07–05–2004	2 – 23
10.	ಕರಿಯಮ್ಮನ ಅಗ್ರಹಾರ	28–02–2004	4 – 02
11.	ಕರಿಯಮ್ಮನ ಅಗ್ರಹಾರ	05–05–2004	4 – 02
12.	ಹೆಬ್ಬಾಳ	11–05–2004	2 – 10
		ಒಟ್ಟು	247 – 26 1/4

ಬೆಂಗಳೂರು ಮೆಟ್ರೋ ರೈಲು ಯೋಜನೆ,

160(164) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು.(ಶಿವಾಜಿನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ಮೆಟ್ರೋ ರೈಲು ಯೋಜನೆಯ ಇಲ್ಲಿಯವರೆಗಿನ ಪ್ರಗತಿ ಏನು (ವಿವರ ನೀಡುವುದು) ;

ಆ) ಇದಕ್ಕಾಗಿ ರಾಜ್ಯ ಸರ್ಕಾರ ಇಲ್ಲಿಯವರೆಗೆ ; ಖರ್ಚು ಮಾಡಿದ ಹಣವೆಷ್ಟು ;

ಇ) ಈ ಪ್ರಸ್ತಾವನೆಗೆ ಕೇಂದ್ರ ಸರ್ಕಾರದ ಅನುಮತಿ ದೊರಕಿದೆಯೇ ;

ಈ) ಈ ಯೋಜನೆಯ ಅಂದಾಜು ವೆಚ್ಚವೆಷ್ಟು ;

ಉ) ಈ ಯೋಜನೆ ಯಾವಾಗ ಪ್ರಾರಂಭವಾಗುವುದು ಹಾಗೂ ಯಾವಾಗ ಪೂರ್ಣಗೊಳ್ಳುವುದು ?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು) :

ಅ) ಬೆಂಗಳೂರು ನಗರದಲ್ಲಿ ಮೆಟ್ರೋ ರೈಲು ಕಲ್ಪಿಸಲು ಕರ್ನಾಟಕ ಸರ್ಕಾರ ಮೆ : ಡೆಲ್ಲಿ ಮೆಟ್ರೋ ರೈಲು ಕಾರ್ಪೋರೇಷನ್‌ನಿಂದ ವಿವರವಾದ ಯೋಜನಾ ವರದಿಯನ್ನು ಪಡೆದು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಸಹ ಭಾಗಿತ್ವವನ್ನು ಪಡೆಯಲು ಮತ್ತು ವಿವಿಧ ತೀರುವಳಿಯನ್ನು ನೀಡಲು ತಿಳುವಳಿಕೆ ಪತ್ರ (ಎರ್‌ಒಯು) ತಯಾರಿಸಿ ಕೇಂದ್ರ ಸರ್ಕಾರಕ್ಕೆ ಆಸ್ತಿ ಸ್ವಾಧೀನ, ಉಪಯುಕ್ತ ಸ್ಥಳಾಂತರ, ವಿವರವಾದ ವಿನ್ಯಾಸಗಳ, ನಕ್ಷೆಗಳ ತಯಾರಿಕೆ ಹಾಗೂ ಟೆಂಡರ್ ದಸ್ತಾವೇಜುಗಳ ಸಿದ್ಧತೆ ಇವೇ ಮುಂತಾದ ಪ್ರಾರಂಭಿಕ ಚಟುವಟಿಕೆ ಬಗ್ಗೆ ಬೆಂಗಳೂರು ಸಮೂಹ ತ್ವರಿತ ಸಾರಿಗೆ ನಿಯಮಿತವು ಕ್ರಮ ಕೈಗೊಂಡಿದೆ.

ಆ) ಯೋಜನಾ ವರದಿಗಾಗಿ ರೂ. 1 ಕೋಟಿ 50 ಲಕ್ಷ ಖರ್ಚು ಮಾಡಲಾಗಿದೆ.

ಇ) ಈ ಯೋಜನೆಗೆ ಕೇಂದ್ರ ಯೋಜನಾ ಆಯೋಗದ ತಾತ್ವಿಕ ಒಪ್ಪಿಗೆ ದೊರಕಿದ್ದು, ಕೇಂದ್ರ ಸರ್ಕಾರದಿಂದ ಪಾಲು ಬಂಡವಾಳ ಹಾಗೂ ತೆರಿಗೆ ರಿಯಾಯಿತಿ ಮತ್ತು ಇತರ ಒಪ್ಪಿಗೆಯನ್ನು ಕಾಯಲಾಗುತ್ತಿದೆ.

ಈ) ಏಪ್ರಿಲ್ 2003ರ ದರದಂತೆ ಯೋಜನೆಯ ವೆಚ್ಚ ರೂ. 4989.00 ಕೋಟಿ ಎಂದು ಅಂದಾಜಿಸಲಾಗಿದೆ.

ಉ) ಈ ಯೋಜನೆಯನ್ನು ಕೇಂದ್ರ ಸರ್ಕಾರದ ಅನುಮತಿ ದೊರಕಿದ ತಕ್ಷಣ ಅಂದರೆ 2004 ರಲ್ಲಿ ಪ್ರಾರಂಭಿಸಿ 5 ವರ್ಷದ ಅವಧಿಯಲ್ಲಿ ಪೂರ್ಣಗೊಳಿಸಲು ಅಂದಾಜಿಸಲಾಗಿದೆ.

ರಾಜ್ಯದಲ್ಲಿ ನೇಕಾರರಿಗೆ ವಿಶೇಷ ಪ್ಯಾಕೇಜ್,

161(176) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು.(ಶಿವಾಜಿನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ನೇಕಾರರಿಗಾಗಿ ಹಿಂದಿನ ಸರ್ಕಾರ ವಿಶೇಷ ಪ್ಯಾಕೇಜ್ ಜಾರಿಗೊಳಿಸಲು ನಿರ್ಧರಿಸಿದುದ್ದು, ನಿಜವಲ್ಲವೇ ;

ಆ) ಹಾಗಿದ್ದಲ್ಲಿ ಆ ವಿಶೇಷ ಪ್ಯಾಕೇಜ್‌ಗಾಗಿ ಮೀಸಲಾಗಿಟ್ಟ ಹಣ ಹಾಗೂ ಅದರಡಿ ಕೈಗೊಳ್ಳಬೇಕಾದ ಕಾರ್ಯಕ್ರಮಗಳು ಯಾವುವು ;

ಇ) ಈ ವಿಶೇಷ ಪ್ಯಾಕೇಜ್‌ನ್ನು ಜಾರಿಗೊಳಿಸಲಾಗಿದೆಯೇ ;

ಈ) ಈ ವಿಶೇಷ ಪ್ಯಾಕೇಜಿಗಾಗಿ 2004–05 ರಲ್ಲಿ ಸರ್ಕಾರ ಮೀಸಲಾಗಿಟ್ಟಿರುವ ಹಣವೆಷ್ಟು ;

ಉ) ಈ ವಿಶೇಷ ಪ್ಯಾಕೇಜಿನ ಅನುಷ್ಠಾನಕ್ಕಾಗಿ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಹೌದು.

ಆ) ಐದು ವರ್ಷಗಳ ಅವಧಿಗೆ ರೂ. 101.82 ಕೋಟಿಗಳು ಬೇಕಾಗಲಿದ್ದು ಪ್ಯಾಕೇಜಿನ ಅಡಿ ಕೈಗೊಳ್ಳಲಿರುವ ಕಾರ್ಯಕ್ರಮಗಳ ವಿವರಗಳನ್ನು ಇದಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ನೀಡಲಾಗಿದೆ.

ಇ) ಆ ಪ್ಯಾಕೇಜ್‌ಗೆ ಸರ್ಕಾರಿ ಆದೇಶ ಸಂಖ್ಯೆ ವಾಕೈ 110 ಜಕೈಇ 2003 ದಿನಾಂಕ 26.2.2004 ರಲ್ಲಿ ಮಂಜೂರಾತಿ ನೀಡಲಾಗಿದೆ.

ಈ) ರೂ. 20.00 ಕೋಟಿಗಳು.